ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 03-08-2016

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ವಿಚಾರ ಸಂಕಿರಣ– ದೃಶ್ಯಕಲಾ ಸಾಹಿತ್ಯ ಮತ್ತು ವಿಮರ್ಶೆ :<br><br>ಉದ್ಘಾಟನೆ:<br><br>ಪ್ರೊ. ಎಂ. ಹೆಚ್. ಕೃಷ್ಣಯ್ಯ,<br>ಮಾಜಿ ಅಧ್ಯಕ್ಷರು,<br>ಕರ್ನಾಟಕ ಸಾಹಿತ್ಯ ಅಕಾಡೆಮಿ,<br>ಬೆಂಗಳೂರು. | 04-08-2016<br>ಗುರುವಾರ<br>ಬೆಳಿಗ್ಗೆ<br>11-00 ಗಂಟೆಗೆ | 'ನಯನ ಸಭಾಂಗಣ'<br>ಕನ್ನಡ ಭವನ,<br>ಜೆ.ಸಿ. ರಸ್ತೆ, ಬೆಂಗಳೂರು |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

# ಆಯ್ಕೆ ಪಟ್ಟಿ ಪ್ರಕಟ

ಬೆಂಗಳೂರು, ಆಗಸ್ಟ್ 3 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕ ಸೇವಾ ಆಯೋಗವು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಲ್ಲಿನ ಸಹಾಯಕ ನಗರ ಯೋಜಕರ 121 ಹುದ್ದೆಗಳ ಅಂತಿಮ ಆಯ್ಕೆ ಪಟ್ಟಿಯನ್ನು ಆಯೋಗದ ಅಂತರ್ಜಾಲ ತಾಣ " http://kpsc.kar.nic.in " ದಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಿ ಆಯ್ಕೆ ಪಟ್ಟಿಯನ್ನು ಇಲಾಖೆಗೆ ರವಾನಿಸಲಾಗಿದೆ. ಆಯ್ಕೆ ಹೊಂದಿದ ಅಭ್ಯರ್ಥಿಗಳಿಗೆ ಸಂಬಂಧಪಟ್ಟ ಇಲಾಖೆಯವರನ್ನು ಸಂಪರ್ಕಿಸುವಂತೆ ಹಿಂಬರಹವನ್ನು ಜಾರಿ ಮಾಡಲಾಗಿದೆ.

ಬಾಬು:ಜಿಪಿಆರ್.

# ಉಪ ನಿರ್ದೇಶಕ ಅಮಾನತ್ತು

ಬೆಂಗಳೂರು, ಆಗಸ್ಟ್ 3 (ಕರ್ನಾಟಕ ವಾರ್ತೆ)

ಬೆಳಗಾವಿಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರಾದ ಬಿ. ಎ. ವಂಟಮುರಿ ಅವರನ್ನು ಕರ್ತವ್ಯ ಲೋಪದ ಆರೋಪದಡಿ ಇಲಾಖಾ ವಿಚಾರಣೆ ಬಾಕಿಯಿರಿಸಿ ಸೇವೆಯಿಂದ ಅಮಾನತ್ತುಗೊಳಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಬಾಬು:ಜಿಪಿಆರ್.

# ಶೂನ್ಯ ಬಡ್ಡಿದರದಲ್ಲಿ 25 ಲಕ್ಷ ರೈತರಿಗೆ 11 ಸಾವಿರ ಕೋಟಿ ರೂ. ಸಾಲ ನೀಡುವ ಗುರಿ

ಬೆಂಗಳೂರು, ಆಗಸ್ಟ್ 3 (ಕರ್ನಾಟಕ ವಾರ್ತೆ)

ಪ್ರಸಕ್ತ ಸಾಲಿನಲ್ಲಿ 25 ಲಕ್ಷ ರೈತರಿಗೆ ಶೂನ್ಯ ಬಡ್ಡಿದರದಲ್ಲಿ 11 ಸಾವಿರ ಕೋಟಿ ರೂ. ಮೊತ್ತದ ಸಾಲ ನೀಡುವ ಗುರಿ ಹೊಂದಲಾಗಿದೆ ಎಂದು ಸಹಕಾರ ಸಚಿವ ಹೆಚ್. ಎಸ್. ಮಹದೇವಪ್ರಸಾದ್ ಅವರು ತಿಳಿಸಿದರು.

ವಿಧಾನಸೌಧದಲ್ಲಿ ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಸಹಕಾರ ಸಚಿವರು ಹಿಂದಿನ ಸರ್ಕಾರ 5 ವರ್ಷದಲ್ಲಿ 75 ಲಕ್ಷ ರೈತರಿಗೆ 25,011 ಕೋಟಿ ರೂ. ಸಾಲ ನೀಡಿದ್ದರೆ ನಮ್ಮ ಸರ್ಕಾರ ಬಂದ ಮೂರು ವರ್ಷಗಳಲ್ಲಿ ಸುಮಾರು 32,476 ಕೋಟಿ ರೂ ಸಾಲ ನೀಡಿದ್ದು, ಕಳೆದ ಸಾಲಿನಲ್ಲಿ 800 ಕೋಟಿ ರೂ. ಬಡ್ಡಿ ಬಾಬ್ತು ಹಣವನ್ನು ರೈತರಿಗೆ ನೀಡಲಾಗಿದೆ ಎಂದರು.

ದೇಶದಲ್ಲೇ ಕರ್ನಾಟಕ ಕಬ್ಬು ಬೆಳೆಗಾರರಿಗೆ ಹೆಚ್ಚು ಬಾಕಿ ಹಣ ಪಾವತಿಸಿದ ಮೊದಲ ರಾಜ್ಯವಾಗಿದೆ ಎಂದ ಮಹಾದೇವ ಪ್ರಸಾದ್ ಅವರು ಕಳೆದ ಮೂರು ವರ್ಷಗಳಲ್ಲಿ 193 ಕೋಟಿ ರೂ. ಮಾರ ಬಾಕಿ ಉಳಿಸಿಕೊಂಡಿದ್ದು, 2013 ರಿಂದ ರೈತರ ಹಣ ಬಾಕಿ ಉಳಿಸಿಕೊಂಡಿದ್ದ ಕಬ್ಬು ಕಾರ್ಖಾನೆಗಳು ಬಾಕಿ ಹಣ ಮರುಪಾವತಿಸಿದಲ್ಲಿ ರೋಡ್ ಟ್ಯಾಕ್ಸ್ ಮತ್ತು ಪರ್ಚೆಸ್ ಟ್ಯಾಕ್ಸ್ ವಿನಾಯಿತಿ ನೀಡುವುದಾಗಿ ಈ ಹಿಂದೆಯೇ ಸುತ್ತೋಲೆ ಹೊರಡಿಸಲಾಗಿತ್ತು. ಸುತ್ತೋಲೆ ಹೊರಡಿಡಿದ ನಂತರ ಬಹುತೇಕ ಕಬ್ಬು ಅರೆಯುವ ಕಾರ್ಖಾನೆಗಳು ರೈತರ ಬಾಕಿ ಹಣವನ್ನು ಪಾವತಿಸಿವೆ ಎಂದು ತಿಳಿಸಿದರು.

ಕಳೆದ ವರ್ಷ 376 ಲಕ್ಷ ಮೆಟ್ರಿಕ್ ಟನ್ ಕಬ್ಬು ರಾಜ್ಯದಲ್ಲಿ ಉತ್ಪಾದನೆಯಾಗಿತ್ತು. ಈ ವರ್ಷ ಅದು 300 ಲಕ್ಷ ಮೆಟ್ರಿಕ್ ಟನ್‌ಗೆ ಇಳಿಯುವ ಸಾಧ್ಯತೆ ಇದೆ ಎಂದ ಸಹಕಾರ ಸಚಿವರು 2015-16ನೇ ಸಾಲಿನಲ್ಲಿ 1226 ಕೋಟಿ ರೂ. ಬಾಕಿ ಹಣ ಇತ್ತು. ವಿನಾಯಿತಿ ನೀಡಿದ ಮೇಲೆ ಬಾಕಿ ಹಣದ ಮಾತ್ರ 86 ಕೋಟಿ ರೂ. ಗೆ ಇಳಿದಿದ್ದು , ಕಬ್ಬು ಕಾರ್ಖಾನೆಗಳಿಗೆ ವಿನಾಯಿತಿ ನೀಡಿದ ಹಿನ್ನೆಲೆಯಲ್ಲಿ ಸರ್ಕಾರಕ್ಕೆ 335 ಕೋಟಿ ರೂ. ಹೊರೆ ಬಿದ್ದಿದೆ ಎಂದು ಮಾತನಾಡಿದರು.

ರಾಜ್ಯದ ವಿವಿಧ ಪ್ರದೇಶಗಳಲ್ಲಿ ಇಲಾಖೆವತಿಯಿಂದ 795 ಕೋಟಿ ರೂ. ವೆಚ್ಚದಲ್ಲಿ ಗೋದಾಮುಗಳನ್ನು ನಿರ್ಮಿಸಲಾಗುತ್ತಿದ್ದು, ಈ ಸಂಬಂಧ ಈಗಾಗಲೇ 272 ಸ್ಥಳಗಳನ್ನು ಗುರುತಿಸಲಾಗಿದೆ ಎಂದ ಸಹಕಾರ ಸಚಿವರು ಗೋದಾಮುಗಳಲ್ಲಿ ತಮ್ಮ ಬೆಳೆಗಳನ್ನು ಇರುವ ರೈತರಿಗೆ ಶೇ 70 ರಷ್ಟು ಸಾಲ ಸೌಲಭ್ಯಗಳನ್ನು ಬ್ಯಾಂಕ್ ವತಿಯಿಂದ ಕೊಡಿಸಲು ಚಿಂತಿಸಲಾಗಿದ್ದು, ರೈತರು ತಮ್ಮ ಬೆಳೆಗಳನ್ನು ಉತ್ತಮ ಬೆಲೆಗೆ ಮಾರಾಟ ಮಾಡಿದ ಮೇಲೆ ಸಾಲ ಪಡೆದ ಬ್ಯಾಂಕುಗಳಿಗೆ ಸಾಲ ಮರುಪಾವತಿಸಬೇಕಾಗುತ್ತದೆ ಎಂದು ಸಹಕಾರ ಸಚಿವ ಹೆಚ್.ಎಸ್. ಮಹಾದೇವಪ್ರಸಾದ್ ಅವರು ಪತ್ರಕರ್ತರನ್ನುದ್ದೇಶಿಸಿ ಮಾತನಾಡಿದರು.

ಬಾಬು:ಜಿಪಿಆರ್.

<u>ವಾರ್ತಾ ವಿಶೇಷ:</u>

# ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ ಆರೋಗ್ಯ ಜಾಗೃತಿ ಅಭಿಯಾನ

ಪರಿಶಿಷ್ಟ ಸಮುದಾಯದ ಜನರಿಗೆ ಗಂಭೀರ ಖಾಯಿಲೆಗಳು ಬಂದಲ್ಲಿ, ಅವರು ಸಾಲ ಮಾಡಿ ಅಥವಾ ತಮ್ಮ ಆಸ್ತಿ-ಪಾಸ್ತಿಗಳನ್ನು ಮಾರಿ ಇನ್ನಷ್ಟು ಸಂಕಷ್ಟಕ್ಕೆ ಸಿಲುಕುತ್ತಿದ್ದ ಅಸಂಖ್ಯ ಉದಾಹರಣೆಗಳನ್ನು ನಾವು ಕಂಡಿದ್ದೇವೆ. ಇಂತಹ ಸಂಕಷ್ಟಗಳಿಂದ ಅವರುಗಳನ್ನು ಪಾರುಮಾಡುವ ಮಹತ್ವದ ಉದ್ದೇಶದೊಂದಿಗೆ ರಾಜ್ಯ ಸರ್ಕಾರವು ಹಲವು ಮಹತ್ವದ ಆರೋಗ್ಯ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.

ಬಿ.ಪಿ.ಎಲ್. ಕುಟುಂಬಗಳಿಗೆ ತೃತೀಯ ಹಂತದ ಚಿಕಿತ್ಸೆಗಳನ್ನು ಉಚಿತವಾಗಿ ನೀಡಲು ರಾಜ್ಯ ಸರ್ಕಾರವು "ವಾಜಪೇಯಿ ಆರೋಗ್ಯಶ್ರೀ" ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. ಎ.ಪಿ.ಎಲ್ ಕುಟುಂಬಗಳಿಗೆ "ರಾಜೀವ್ ಆಯೋಗ್ಯ ಭಾಗ್ಯ" ಯೋಜನೆಯ ಮೂಲಕ ಸಹ-ಪಾವತಿ ಆಧಾರದಲ್ಲಿ ಚಿಕಿತ್ಸೆ ಒದಗಿಸಲಾಗುತ್ತಿದೆ. ರಸ್ತೆ ಅಪಘಾತದ ಗಾಯಾಳುಗಳಿಗೆ "ಮುಖ್ಯಮಂತ್ರಿ ಸಾಂತ್ವನ-ಹರೀಶ್" ಯೋಜನೆಯ ಮೂಲಕ ತುರ್ತು ಚಿಕಿತ್ಸೆ ನೀಡಲಾಗುತ್ತಿದೆ. "ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆ" ಯ ಅಡಿಯಲ್ಲಿ ಬಿಪಿಎಲ್ ಕುಟುಂಬಗಳು ಹಾಗೂ ಅಸಂಘಟಿತ ಕಾರ್ಮಿಕರಿಗೆ ದ್ವಿತೀಯ ಹಂತದ ಚಿಕಿತ್ಸೆಗಳನ್ನು ಉಚಿತವಾಗಿ ಒದಗಿಸಲಾಗುತ್ತಿದೆ.

ಆದಾಗ್ಯೂ ಈ ಯೋಜನೆಗಳ ಸೌಲಭ್ಯಗಳನ್ನು ಬಳಸಿಕೊಳ್ಳುವಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಜನರು ಹೆಚ್ಚಿನ ಮಟ್ಟದಲ್ಲಿ ಮುಂದೆ ಬರುತ್ತಿಲ್ಲ. ಮಾಹಿತಿಯ ಕೊರತೆ, ಅರಿವಿನ ಕೊರತೆ, ಹಿಂಜರಿಕೆ ಅಥವಾ ಸೂಕ್ತ ಮಾರ್ಗದರ್ಶನ ಇಲ್ಲದೆ ಇರುವುದು ಇದಕ್ಕೆ ಕಾರಣವಾಗಿರಬಹುದು.

ಈ ಹಿನ್ನೆಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನ-ಸಮುದಾಯದಲ್ಲಿ ಆರೋಗ್ಯ ಯೋಜನೆಗಳ ಕುರಿತು ಹೆಚ್ಚಿನ ಜಾಗೃತಿ ಮೂಡಿಸಲು ವಾರ್ತಾ ಇಲಾಖೆಯ ಸಹಭಾಗಿತ್ವದೊಂದಿಗೆ ಬೀದಿ ನಾಟಕ, ಹಾಡು, ಕಿರುಚಿತ್ರ ಪ್ರದರ್ಶನ, ಸಮುದಾಯ ಸಭೆಗಳು ಮುಂತಾದ ಜನ-ಜಾಗೃತಿ ಕಾರ್ಯಕ್ರಮಗಳನ್ನು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನಸಂಖ್ಯೆ ಶೇ. 40ಕ್ಕಿಂತ ಹೆಚ್ಚು ಇರುವ 7202 ಗ್ರಾಮಗಳಲ್ಲಿ ನಡೆಸಲು ಉದ್ದೇಶಿಸಲಾಗಿದೆ.

ಈ ವಿಶೇಷ ಜಾಗೃತಿ ಅಭಿಯಾನವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿರುವ ಗ್ರಾಮಗಳಲ್ಲಿ ಸಂಚರಿಸಿ, ಆರೋಗ್ಯ ಯೋಜನೆಗಳ ಕುರಿತು ಬೀದಿ ನಡಕ ಪ್ರದರ್ಶನ, ಕಿರುಚಿತ್ರ ಪ್ರದರ್ಶನ ಹಾಗೂ ಸಂವಾದ ಸಭೆಗಳನ್ನು ನಡೆಸುವ ಮೂಲಕ ಆ ಜನರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ.

ಆರೋಗ್ಯ ಜಾಗೃತಿ ಅಭಿಯಾನದ ಕಲಾಜಾಥಾ ತಂಡಗಳು ಗ್ರಾಮಗಳಿಗೆ ತೆರಳಿ ಜನರಲ್ಲಿ ಜಾಗೃತಿ ಮೂಡಿಸುವುದರ ಜೊತೆಗೆ ಈ ಗ್ರಾಮಗಳ ಜನರಿಗಾಗಿ ಸಂಬಂಧಿಸಿದ ತಾಲ್ಲೂಕು ಆಸ್ಪತ್ರೆಯಲ್ಲಿ ವಿಶೇಷ ಆರೋಗ್ಯ ತಪಾಸಣಾ ಶಿಬಿರಗಳನ್ನು ಆಯೋಜಿಸಲಾಗುತ್ತದೆ. ಈ ಆರೋಗ್ಯ ಶಿಬಿರದಲ್ಲಿ ಜನರ ಆರೋಗ್ಯ ತಪಾಸಣೆ ನಡೆಸಿ, ರೋಗ ಸಂತ್ರಸ್ಥರಿಗೆ ಸೂಕ್ತ ಚಿಕಿತ್ಸೆ ಒದಗಿಸಲು ಕ್ರಮವಹಿಸಲಾಗುವುದು. ಈ ಮೂಲಕ ತಳ ಸಮುದಾಯದ ಜನರ ಆರೋಗ್ಯ ರಕ್ಷಣೆಗೆ ಸರ್ಕಾರ ವಿಶೇಷ ಆಧ್ಯತೆಯನ್ನು ನೀಡಿರುತ್ತದೆ.

ಹೆಚ್ಚಿನ ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರು ಆರೋಗ್ಯ ಯೋಜನೆಗಳ ಸೌಲಭ್ಯಗಳನ್ನು ಪಡೆದುಕೊಳ್ಳುವ ಮೂಲಕ ಅವರ ಹಾಗೂ ಅವರ ಕುಟುಂಬಗಳ ಆರೋಗ್ಯವನ್ನು ರಕ್ಷಿಸಿಕೊಳ್ಳಬಹುದಾಗಿದೆ.

ಬಾಬು:ಜಿಪಿಆರ್.

## ಅಂತರ್ಜಾಲದಲ್ಲಿ ಜಿ.ಪಿ.ಎಫ್. ವಿವರ ಪ್ರಕಟ

ಬೆಂಗಳೂರು, ಆಗಸ್ಟ್ 3 (ಕರ್ನಾಟಕ ವಾರ್ತೆ)

ಕರ್ನಾಟಕ ಸರ್ಕಾರ ಅಖಿಲ ಭಾರತೀಯ ಸೇವಾನಿರತ (ಎ.ಐ.ಎಸ್) ಅಧಿಕಾರಿಗಳ, ರಾಜ್ಯ ಶ್ರೇಷ್ಠ ನ್ಯಾಯಾಲಯ ನ್ಯಾಯಾಧೀಶರುಗಳ ಹಾಗೂ ರಾಜ್ಯ ಸರ್ಕಾರದ ಇತರ ಇಲಾಖಾ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ಕರ್ನಾಟಕ ಭವಿಷ್ಯ ನಿಧಿಯ 2015-16 ವಾರ್ಷಿಕ

ಲೆಕ್ಕ ತ:ಖ್ತೆಗಳನ್ನು ವೆಬ್‌ಸೈಟ್‌ನಲ್ಲಿ ಬಿಡುಗಡೆ ಮಾಡಲಾಗಿದೆ. ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿಯ ವಂತಿಗೆದಾರರು ತಮ್ಮ ಸಾಮಾನ್ಯ ಭವಿಷ್ಯ ನಿಧಿಯ ವಂತಿಗೆದಾರರು ತಮ್ಮ ಸಾಮಾನ್ಯ ಭವಿಷ್ಯ ನಿಧಿಯ **2015–16** ನೇ ಸಾಲಿನ ವಾರ್ಷಿಕ ಲೆಕ್ಕ ತ:ಖ್ತೆಗಳನ್ನು ಎ.ಜಿ. ಕರ್ನಾಟಕ ಕಚೇರಿಯ ವೆಬ್‌ಸೈಟ್ **http://www.agkar.cag.gov.in** ವಿಳಾಸದಿಂದ ಪಡೆಯಬಹುದಾಗಿದೆ ಎಂದು ಮಹಾಲೇಖಪಾಲರು (ಲೆಕ್ಕ ಮತ್ತು ಹಕ್ಕುದಾರಿ), ಕರ್ನಾಟಕ, ಬೆಂಗಳೂರು ಅವರು ತಿಳಿಸಿರುತ್ತಾರೆ.

ವಂತಿಗೆದಾರರ ಅನುಕೂಲಕ್ಕಾಗಿ ಸಾಮಾನ್ಯ ಭವಿಷ್ಯ ವಿಧಿಯ ವಾರ್ಷಿಕ ಲೆಕ್ಕ ತ:ಖ್ತೆಗಳನ್ನು ಹೆಚ್.ಆರ್.ಎಮ್.ಎಸ್. ವೆಬ್‌ಸೈಟ್ ವಿಳಾಸ **http//www.hrms.karnataka.gov.in** ದಿಂದ ಸಂಬಂಧಪಟ್ಟ ಹಣ ಸೆಳೆಯುವ ಮತ್ತು ಬಟವಾಡೆ ಅಧಿಕಾರಿಗಳ ಮೂಲಕವೂ (**HRMS>MENU>HOME>Mis Report>Download-GPF-Statement**) ಪಡೆದುಕೊಳ್ಳುವ ವ್ಯವಸ್ಥೆಯನ್ನು ಮಾಡಲಾಗಿದೆ.

ವಂತಿಗೆದಾರರಿಗೆ ವೆಬ್‌ಸೈಟ್‌ನಿಂದ ವಾರ್ಷಿಕ ಲೆಕ್ಕ ತ:ಖ್ತೆಗಳನ್ನು ಪಡೆಯಲು ತೊಂದರೆ ಎದುರಾದಲ್ಲಿ ಈ ಕಚೇರಿಯ ಇ–ಮೇಲ್ ವಿಳಾಸ **(Agpf.kar@nic.in)** ಕ್ಕೆ ಅಥವಾ ದೂರವಾಣಿ ಸಂಖ್ಯೆ **080–22640310** ಸಂಪರ್ಕಿಸಲು ಕೋರಲಾಗಿದೆ.

ವಂತಿಗೆದಾರರು ತಮ್ಮ ವಾರ್ಷಿಕ ಲೆಕ್ಕ ತ:ಖ್ತೆಯಲ್ಲಿ ವಂತಿಗೆ ಮತ್ತು ಮುಂಗಡದ ವಿಷಯವಾಗಿ ಏನಾದರೂ ಲೋಪದೋಷಗಳು ಕಂಡುಬಂದಲ್ಲಿ ವರಿಷ್ಠ ಲೇಖಾಧಿಕಾರಿ (ಎಫ್.ಎಂ.) ಪ್ರಧಾನ ಮಹಾಲೇಖಪಾಲರ ಕಚೇರಿ, (ಲೆಕ್ಕ ಮತ್ತು ಹಕ್ಕುದಾರಿ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ) ಬೆಂಗಳೂರು ಇವರಿಗೆ ಪತ್ರ ಮುಖೇನ ತಿಳಿಸಬಹುದಾಗಿದೆ. ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ : **080–22640310/080–22640313**.

ಬಾಬು:ಜಿಪಿಆರ್.

## GPF STATEMENTS

Bangalore August 3 (Karnataka Information)

The Accountant General (A&E), Karnataka, Park House Road, Bengaluru 560 001, informs that the **Annual Accounts Statements for the year 2015-16** relating to General Provident Fund (GPF) of the All India Service Officers (Karnataka Cadre), Judges of High Court and Employees of Government of Karnataka, have been uploaded in website.

The Accountant General (A&E) hereby informs, that the Subscribers can access their GPF Annual Accounts Statement through AG Karnataka website **http://www.agkar.cag.gov.in** and download the Annual Statement for the year 2015-16.

In addition, the GPF Annual Accounts Statements will be available for download at the Human Resource Management System (HRMS) website of Government of Karnataka http://www.hrms.karnataka.gov.in by the concerned DDOs (by accessing HRMS Menu Home MIS report download GPF statement) for the benefit of the GPF subscribers.

In case of GPF subscribers experiencing any difficulty relating to log in to the website, they may contact this office through e-mail (Agpf**.kar@nic.in**) or Phone Number (**080-22640310)**

In case of any discrepancy in accounting the subscription and withdrawals in their GPF Accounts, the Subscribers may write to Senior Accounts Officer/FM, office of the Principal Accountant General (A&E), Karnataka, Park House Road, Bengaluru – 560 001. (Contact Number – **080-22640310 & 080-22640313**)

babu/km